

ಪೆಂಗಾಂಗ್ ಸರೋವರದ ಬಳಿ ಕಂಡ ಹಿಮಚ್ಛಾದಿತ ಶಿಖರ





ಮನಮೋಹಕ ಪೆಂಗಾಂಗ್ ಸರೋವರ

ವಶಪಡಿಸಿಕೊಂಡ ಯುದ್ಧೋಪಕರಣಗಳ ಸಂಗ್ರಹವಿದೆ. ಅಲ್ಲಿಂದ ನಮ್ಮ ಪಯಣ ಶಾಂತಿ ಸ್ತೂಪಕ್ಕೆ ಸಾಗಿತು. ಬುದ್ಧ ಅವತರಿಸಿದ 2500 ವರ್ಷಗಳ ನೆನಪಿಗಾಗಿ 1991ರಲ್ಲಿ ಇದನ್ನು ನಿರ್ಮಿಸಿದ್ದು, ಬುದ್ಧನ ಭವ್ಯ ಮೂರ್ತಿಯನ್ನು ಕಣ್ತುಂಬಿಕೊಳ್ಳಬಹುದು.

ಎರಡನೇ ದಿನ ನಮ್ಮ ರೋಚಕ ಪಯಣ ಆರಂಭವಾಯ್ತು. ಬೈಕ್ ಬಾಡಿಗೆ ಪಡೆದು ಬೆಳಿಗ್ಗೆ ಲೇಹ್‌ನಿಂದ ಖರ್ದುಂಗ್ಲಾ ಪಾಸ್‌ಗೆ ಸವಾರಿ ಹೊರಟೆವು. 40 ಕಿ.ಮೀ. ದೂರದ ದುರ್ಗಮ ಹಾದಿ. ಅಲ್ಲಲ್ಲಿ ಡಾಂಬರು ರಸ್ತೆ ಕಂಡಿದ್ದು ಬಿಟ್ಟರೆ ಉಳಿದದ್ದು ಕಲ್ಲು, ಮಣ್ಣಿನ ರಸ್ತೆ. ಹಾದಿಗುಂಟ ಲೇಹ್ ಅರಮನೆ, ಶಾಂತಿ ಸ್ತೂಪ, ಬೌದ್ಧ ಮಂದಿರ ಸೇರಿದಂತೆ ಇಡೀ ಲೇಹ್ ನಗರದ ವಿಹಂಗಮ ನೋಟ ದಕ್ಕುತ್ತದೆ. ಕಡಿದಾದ ಪರ್ವತ ಶ್ರೇಣಿ, ಅದನ್ನು ಸೀಳಿ ನಿರ್ಮಿಸಿರುವ ರಸ್ತೆಗಳು ಹಾವಿನ ಬಾಲದಂತೆ ಗೋಚರಿಸುತ್ತವೆ. ಕೆಳಗೆ ನೋಡಿದರೆ ಪ್ರಪಾತ, ಕಲ್ಲು ಮಣ್ಣು, ದೂಳು ಎನ್ನದೆ ಶರವೇಗದಲ್ಲಿ ಮುನ್ನುಗ್ಗುವ ಸಾಹಸಿ ಬೈಕ್ ಸವಾರರು ಕಣ್ಣಿಗೆ ಬೀಳುತ್ತಾರೆ.

ವಿಶ್ವದ ಅತಿ ಎತ್ತರದ ಮೋಟಾರು ರಸ್ತೆಗಳಲ್ಲಿ ಒಂದಾದ ಖರ್ದುಂಗ್ಲಾ ಪಾಸ್ ತಲುಪುವ ವೇಳೆಗೆ ಮಧ್ಯಾಹ್ನ ಆಗಿತ್ತು. ಸಮುದ್ರ ಮಟ್ಟದಿಂದ 17,982 ಅಡಿ ಎತ್ತರದಲ್ಲಿರುವ ಈ ಸ್ಥಳದಲ್ಲಿ ನೆಟ್ಟಿದ್ದ ನಾಮಫಲಕದ ಮುಂದೆ ಫೋಟೊ ತೆಗೆಸಿಕೊಳ್ಳಲು ಪ್ರವಾಸಿಗರ ದಂಡು. ಈ ಸಾಹಸಿ ಪ್ರಯಾಣದಲ್ಲಿ ತುತ್ತತುದಿಗೆ ತಲುಪಿದ ಸಂತಸ ನಮ್ಮದು. ಅದೇ ಸಂತಸದಲ್ಲಿ, ಅಲ್ಲಿಂದ ನುಬ್ರಾಗೆ ಹೊರಟೆವು.

ಖರ್ದುಂಗ್ಲಾ ಪಾಸ್‌ನಿಂದ ಹೊರಟ ಸ್ವಲ್ಪ ಸಮಯದಲ್ಲಿ ಕೆಳಭಾಗದಲ್ಲಿ 'ನಾರ್ತ್ ಪುಲ್ಲು' ಸಿಗುತ್ತದೆ. ಅಲ್ಲಿ ವಿಸ್ತಾರ ತೊರೆ ಹರಿಯುವುದರಿಂದ ಅಲ್ಲಿನ ಭೂದೃಶ್ಯವೂ ಸೊಗಸಾಗಿತ್ತು. ನುಬ್ರಾ ಕಣಿವೆ ವ್ಯಾಪ್ತಿಯಲ್ಲೇ ಹರಿಯುವ ಶ್ಯೋಕ್ ನದಿ ಮರಳುಗಾಡನ್ನೂ ಸೃಷ್ಟಿಸಿದೆ. ವಿಸ್ತಾರವಾಗಿ ಹರಡಿರುವ ಮರಳು ದಿಬ್ಬಗಳ ವಿಶಿಷ್ಟ ಭೂದೃಶ್ಯ ಗಮನ ಸೆಳೆಯುತ್ತದೆ. ನುಬ್ರಾ ಪಟ್ಟಣದಲ್ಲಿ ಜೋಡಿ ಡುಬ್ಬದ ಮಂಗೋಲಿಯಾದ 'ಬಾಕ್ಟ್ರಿಯನ್' ತಳಿಯ ಒಂಟೆ ಸವಾರಿಗೆ ಪ್ರಸಿದ್ಧಿ. ಪ್ರವಾಸಿಗರನ್ನು ಹೊತ್ತ ಒಂಟೆಗಳು ಮರಳುಗಾಡನ್ನು ಸುತ್ತು ಹಾಕಿ ಬರುತ್ತವೆ. ಇಳಿಸಂಜೆಯಲ್ಲಿ ಸೂರ್ಯನ ಕಿರಣಗಳಿಂದ ಕಂಗೊಳಿಸುತ್ತಿದ್ದ ಪರ್ವತ ಶ್ರೇಣಿ, ಬೀಸುತ್ತಿದ್ದ ತಂಗಾಳಿ, ಪಕ್ಕದಲ್ಲೇ ಹರಿಯುತ್ತಿದ್ದ ಶ್ಯೋಕ್ ನದಿ ರೋಮಾಂಚನಕಾರಿಯಾಗಿತ್ತು. ಆ ದಿನ ಹುಂಡರ್‌ನಲ್ಲಿ ತಂಗಿ ಮಾರನೇ ದಿನ ತಾಂಗ್‌ನತ್ತ ಪಯಣ ಮುಂದುವರೆಸಿದೆವು.

## ಭಾರತದ ಕೊನೆಯ ಹಳ್ಳಿಯ ಚೆಲುವು

ಹುಂಡರ್‌ನಿಂದ ದಿಸ್ಕಿತ್–ತುರ್‌ತುಕ್ ಹೆದ್ದಾರಿಯಲ್ಲಿ 95 ಕಿ.ಮೀ. ಸಾಗಿದರೆ ಭಾರತದ ಕೊನೆಯ ಹಳ್ಳಿ 'ತಾಂಗ್' ಸಿಗುತ್ತದೆ. ಈ ರಸ್ತೆಯಲ್ಲಿ ಮಿಲಿಟರಿ ಶಿಬಿರಗಳು ಕಂಡವು. ಶ್ಯೋಕ್ ನದಿ ಪಾತ್ರದಲ್ಲೇ ರಸ್ತೆ ಹಾದು ಹೋಗುವುದರಿಂದ ಇಲ್ಲಿನ ಪಯಣ ರೋಮಾಂಚನಕಾರಿ, ಅಷ್ಟೇ ಅಪಾಯಕಾರಿಯಾಗಿಯೂ ಕಂಡಿತು. ತುರ್‌ತುಕ್ ಹಳ್ಳಿಯಿಂದ ಐದಾರು ಕಿ.ಮೀ. ಸಾಗಿದರೆ ಸಿಗುವುದೇ ತಾಂಗ್ ಹಳ್ಳಿ. ಇದು ನಮ್ಮ ದೇಶದ ಕೊನೆಯ ಹಳ್ಳಿ.

ಮರುದಿನ ಪೆಂಗಾಂಗ್ ತಲುಪುವ ವೇಳೆ ಮಧ್ಯಾಹ್ನವಾಗಿತ್ತು. ಹುಂಡರ್‌ನಿಂದ ಮತ್ತೆ ಸಾಹಸಮಯ ಪಯಣ. ಬೆಣಚು ಕಲ್ಲುಗಳ ನಡುವೆ ಬೈಕ್‌ಗಳ ಸವಾರಿ. ಇದೇ ಹಾದಿಯಲ್ಲಿ ಮರುಭೂಮಿಯ ದರ್ಶನವೂ ಆಗಲಿದ್ದು, ಮರಳಿನ ನಡುವೆಯೇ ಬೈಕ್ ಓಡಿಸುವುದು ಮತ್ತೊಂದು ಸವಾಲು. ಸಾಹಸಮಯ ಪ್ರಯಾಣದ ನಡುವೆ ಈ ಹಾದಿ ಅದ್ಭುತ ಭೂದೃಶ್ಯದ ದರ್ಶನ ಮಾಡಿಸುತ್ತದೆ. ಮಣ್ಣನ್ನೇ ಹೊದ್ದಂತೆ ವಿಸ್ತಾರವಾಗಿ ಹರಿಯುವ ಶ್ಯೋಕ್ ನದಿಗೆ ಅಲ್ಲಲ್ಲಿ ಶುಭ್ರ, ತಿಳಿನೀಲಿ ಬಣ್ಣದ ತೊರೆ, ಝರಿಗಳು ಲೀನಗೊಳ್ಳುತ್ತಾ ಮುಂದೆ ಸಾಗುತ್ತವೆ. ಶ್ಯೋಕ್‌ನಿಂದ ಮುಂದೆ ದೊಡ್ಡ ಗಾತ್ರದ ಬಂಡೆಗಳನ್ನು ಕೊರೆದು ರಸ್ತೆ ನಿರ್ಮಿಸಲಾಗಿದೆ. ಸುತ್ತಲೂ ಬಂಡೆಗಳಿಂದ ಕೂಡಿದ ಬೆಟ್ಟಗಳ ಶ್ರೇಣಿ, ಎರಡೂ ಬದಿ ಹರಿಯುವ ತಿಳಿನೀಲಿ ಬಣ್ಣದ ತೊರೆ, ಬಂಡೆಗಳ ಮೇಲೆ ಸ್ವಚ್ಛಂದವಾಗಿ ಓಡಾಡುತ್ತಿದ್ದ ಕಾಡು ಕುರಿಮರಿಗಳು, ತೊರೆ ದಾಟಲು ಅಲ್ಲಲ್ಲಿ ನಿರ್ಮಿಸಿರುವ ಸೇತುವೆಗಳು, ಹೀಗೆ ನಿಸರ್ಗದ ರಮಣೀಯ ದೃಶ್ಯಗಳು ಎದುರಾದವು.

## ಮನಮೋಹಕ ಪೆಂಗಾಂಗ್

ಗಿರಿಶಿಖರಗಳಿಂದ ಸುತ್ತುವರಿದಿರುವ ಪೆಂಗಾಂಗ್ ಸರೋವರದ ದೃಶ್ಯ ಅದ್ಭುತ. ಹಿಮಚ್ಛಾದಿತ ಗಿರಿಶಿಖರಗಳು, ಸ್ಫಟಿಕ ಶುಭ್ರ, ನೀಲಿ ಬಣ್ಣದಿಂದ ಕಂಗೊಳಿಸುತ್ತಿದ್ದ ಸರೋವರಕ್ಕೆ ಮಾರುಹೋಗದ ವ್ಯಕ್ತಿಯುಂಟೇ? ಕೊರೆಯುತ್ತಿದ್ದ ಚಳಿ, ವೇಗವಾಗಿ ಬೀಸುತ್ತಿದ್ದ ಗಾಳಿ, ಪ್ರಕಾಶಮಾನವಾಗಿ ಬೆಳಗುತ್ತಿದ್ದ ಸೂರ್ಯನ ಕಿರಣಗಳ ನಡುವೆ ಸರೋವರದ ದಂಡೆಯಲ್ಲಿ ವಿಹರಿಸುವ ಹಿತಾನುಭವ ಅಳತೆಗೆ ನಿಲುಕದ್ದು.

ಸಂಜೆ ಆಗುತ್ತಿದ್ದಂತೆ ಪರ್ವತಗಳನ್ನು ಹಿಮ ಆವರಿಸಿ, ಚಳಿ ವಿಪರೀತವಾಗುತ್ತದೆ. ರಾತ್ರಿಯಾಗುತ್ತಿದ್ದಂತೆ ಓಡಾಡಲು ಸಾಧ್ಯವಾಗದಷ್ಟು ಥಂಡಿ. ಚಳಿಗಾಲದಲ್ಲಿ ಈ ಸರೋವರ ಹಿಮಗಟ್ಟಲಿದ್ದು, ಇದರ ಮೇಲೆ ಮ್ಯಾರಥಾನ್ ಓಟ, ಐಸ್ ಸ್ಕೇಟಿಂಗ್‌ನಂತಹ ಕ್ರೀಡಾಸ್ಪರ್ಧೆಗಳನ್ನೂ ಆಯೋಜಿಸುತ್ತಾರಂತೆ. ಕೊನೆಯ ದಿನ ಪೆಂಗಾಂಗ್‌ನಿಂದ ಲೇಹ್‌ಗೆ ಪಯಣ ಆರಂಭಿಸಿದೆವು. ಈ ಹಾದಿಯಲ್ಲಿ ವಿಶ್ವದ 10ನೇ ದೊಡ್ಡ ಮೋಟಾರು ರಸ್ತೆಯಾದ ಚಾಂಗ್ಲಾ ಪಾಸ್ ಸಿಗುತ್ತದೆ. ಇಲ್ಲಿ ಹಿಮ ಶಿಖರಗಳನ್ನು ಹತ್ತಿರದಿಂದ ನೋಡುವ ಭಾಗ್ಯ ದೊರೆಯಿತು.

ಲೇಹ್ ನಗರ ತಲುಪಿ ಅಲ್ಲಿನ ಲೇಹ್ ಅರಮನೆಗೆ ಹೋಗುವ ವೇಳೆಗೆ ಸಂಜೆ ಆಗಿತ್ತು. ಸೂರ್ಯನ ಕಿರಣಗಳು ಅರಮನೆ ಮೇಲೆ ಬಿದ್ದಿದ್ದವು. ಗುಡ್ಡದ ಮೇಲೆ 1600ರಲ್ಲಿ ಸೆಂಗೆ ನಮ್ಯಾಲ್ ಎಂಬ ರಾಜ ನಿರ್ಮಿಸಿದ ಈ ಅರಮನೆಗೆ ಲಾಚೆನ್ ಪಾಲ್ಕರ್ ಅರಮನೆ ಎಂದೂ ಹೆಸರಿದೆ. ಒಂಬತ್ತು ಮಹಡಿ ಹೊಂದಿರುವ ಇದರ ಹೆಚ್ಚಿನ ಭಾಗ ಹಾಳಾಗಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದುರಸ್ತಿ ಕಾರ್ಯ ಮಾಡುತ್ತಿದೆ. ಅಲ್ಲಿಂದ ಇಡೀ ಲೇಹ್ ನಗರದ ವಿಹಂಗಮ ನೋಟ ದಕ್ಕುತ್ತದೆ.

ಲೇಹ್ ನಗರದ ಸುಂದರ ನೋಟಗಳನ್ನೂ, ಅದು ಕೊಟ್ಟ ಅನುಭವ, ನೆನಪುಗಳ ಬುತ್ತಿಯನ್ನೂ ಕಟ್ಟಿಕೊಂಡು ಊರಿನತ್ತ ಮುಖ ಮಾಡಿದೆವು.

ಪ್ರತಿಕ್ರಿಯಿಸಿ: feedback@sudha.co.in